**ಸಾಕ್ಷಿಯನ್ನು ದಿನಾಂಕಃ 15-10-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್.ಜಿ.ಹೆಗಡೆಯವರಿಂದ,**

ಬ್ಯಾಂಕಿನ ಎಕೌಂಟ್ ನಂಬರಿಗೆ ಕಾರ್ಯದರ್ಶಿಯ ಮೊಬೈಲ್ ನಂಬರ್ ಲಿಂಕ್ ಇರುತ್ತದೆ ಎಂದರೆ ಆ ಕಾಲಕ್ಕೆ ಆ ರೀತಿ ಇರಲಿಲ್ಲ, ಆದರೆ ಸರಿಯಾಗಿ ನೆನಪಿಲ್ಲ. ಮೊಬೈಲ್ ನಂಬರ್ ಲಿಂಕ್ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯ ಹೆಸರಿಗೆ ಹಣ ಜಮಾ ಆದ ಕೂಡಲೇ ಈ ಬಗ್ಗೆ ಕಾರ್ಯದರ್ಶಿಯವರ ಮೊಬೈಲ್‌ಗೆ ಸಂದೇಶ ಹೋಗಿತ್ತು ಎಂದರೆ ಅದು ನನಗೆ ಗೊತ್ತಿಲ್ಲ. ಸಂಘದಿಂದ 1 ನೇ ಆರೋಪಿಗೆ ಕೊಡಬೇಕಾಗಿದ್ದ ಹಣದ ಸಲುವಾಗಿ 2 ನೇ ಆರೋಪಿ 1 ನೇ ಆರೋಪಿಗೆ ಚೆಕ್ ಕೊಟ್ಟಿದ್ದರು ಎಂದರೆ ಅದು ಸರಿಯಲ್ಲ. ಸದರಿ ಚೆಕ್ ದಿನಾಂಕ 26-09-2014 ಎಂದರೆ ಸರಿ. ಸದರಿ ಚೆಕ್ 01-10-2016 ರಂದು ನಗದೀಕರಣವಾಗಿರುತ್ತದೆ. 26-09-2014 ರ ಚೆಕ್ ಖಾಲಿ ಚೆಕ್ಕೋ ಅಥವಾ ಬರೆದು ಕೊಡಲಾದ ಚೆಕ್ಕೋ? ಎಂಬ ಬಗ್ಗೆ ಕಾರ್ಯದರ್ಶಿಯವರ ಬಳಿ ವಿಚಾರಿಸಿರುತ್ತೇನೆ. ಆಗ ಅವರು ಖಾಲಿ ಚೆಕ್ ನ್ನು ನೀಡಿರುವುದಾಗಿ ಹೇಳಿರುತ್ತಾರೆ. ಕಾರ್ಯದರ್ಶಿಯವರು ಚೆಕ್‌ನ್ನು ದಿನಾಂಕವನ್ನು ಮತ್ತು ಸಂಪೂರ್ಣ ಮೊತ್ತವನ್ನು ನಮೂದಿಸಿ ನೀಡಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚೆಕ್ ಕಾಣೆಯಾಗಿದ್ದರಿಂದ ಸದರಿ ಚೆಕ್ಕಿನ ಮೇಲೆ ಹಣ ನೀಡಬಾರದು ಎಂದು ಕಾರ್ಯದರ್ಶಿಯವರು ಬ್ಯಾಂಕಿಗೆ ಮನವಿ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ದೂರನ್ನು ಜಿ. ವಿ. ಭಟ್ಟ ವಕೀಲರ ಮೂಲಕ ತಯಾರು ಮಾಡಿಸಿರುತ್ತೇನೆ. ಕಾರ್ಯದರ್ಶಿಯವರಿಗೆ ಅವಶ್ಯಕತೆ ಬರಬಹುದು ಎನ್ನುವ ಕಾರಣಕ್ಕೆ ನಾನೊಬ್ಬನೇ ಸಹಿ ಹಾಕಿ ಕಾರ್ಯದರ್ಶಿಯವರ ಕೈಗೆ ಕೊಡುತ್ತಿದ್ದೆ, ಆ ಸಮಯಕ್ಕೆ ಕಾರ್ಯದರ್ಶಿಯವರು ಸಹಿ ಹಾಕಿ ಚೆಕ್ಕನ್ನು ಇಟ್ಟುಕೊಳ್ಳುತ್ತಿರಲಿಲ್ಲ, ಅವರು ಯಾವ ಚೆಕ್‌ನ್ನು ಕೊಡಬೇಕಾಗುತ್ತದೆಯೋ ಆಗ ಅವರು ಸಹಿ ಮಾಡಿ ಕೊಡುತ್ತಿದ್ದರು. ಕಾರ್ಯದರ್ಶಿಯವರು ಚೆಕ್ ಕೊಡುವಾಗ ಅವರೂ ಸಹ ಸಹಿ ಮಾಡಿ ಕೊಟ್ಟರೆ ಮಾತ್ರ ಚೆಕ್ ನಗದೀಕರಣಗೊಳ್ಳುತ್ತದೆ ಎಂದರೆ ಸರಿ. ಕಾರ್ಯದರ್ಶಿಯವರು ಚೆಕ್ ನ್ನು ಕೊಡುವಾಗ ಅದಕ್ಕೆ ಸಹಿ ಮಾಡಿಕೊಡುವ ಜವಾಬ್ದಾರಿ ಅವರಿಗೆ ಇರುತ್ತದೆ ಎಂದರೆ ಸರಿ.

ನಾನು ನೀಡಿದ್ದ 3 ಚೆಕ್‌ಗಳ ಪೈಕಿ ಒಂದು ಚೆಕ್‌ನ್ನು 1 ನೇ ಆರೋಪಿ ಜಮಾ ಮಾಡಿಕೊಂಡಿದ್ದು ಉಳಿದ 2 ಚೆಕ್‌ಗಳು ಯಾರಿಗೆ ನೀಡಲಾಗಿದೆ ಮತ್ತು ಎಷ್ಟು ಮೊತ್ತಕ್ಕೆ ಜಮಾ ಆಗಿದೆ ಎಂಬುದನ್ನು ನಾನು ವಿಚಾರಿಸಿಲ್ಲ, ಆದರೆ ಅವುಗಳು ಸರಿಯಾಗಿ ಬಳಕೆಯಾಗಿದೆ ಎಂದು ಕಾರ್ಯದರ್ಶಿಯವರು ಹೇಳಿರುತ್ತಾರೆ. ದಿನಾಂಕ 26-09-2016 ರಂದು ಬ್ಯಾಂಕ್ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂಬುದನ್ನು ನಾನು ವಿಚಾರಿಸಿಲ್ಲ. ಚೆಕ್ ದುರುಪಯೋಗ ಆದ ಬಗ್ಗೆ ನನಗೆ ದಿನಾಂಕ 05-10-2016 ರಂದು ಗೊತ್ತಾಗಿದ್ದ ದುರುಪಯೋಗ ಆದ ಚೆಕ್ ಬಗ್ಗೆ ನೀವು ಕಾರ್ಯದರ್ಶಿ ಬಳಿ ವಿಚಾರಿಸಿದ್ದೀರಾ ಎಂದರೆ ಈ ವೇಳೆಗಾಗಲೇ ಮಾಹಿತಿ ಸಿಡಿಓ ರವರಿಗೆ ತಲುಪಿದ್ದು ಅವರು ಎ.ಆರ್. ರವರಿಗೆ ಪ್ರಾಥಮಿಕ ವರದಿಯನ್ನು ನೀಡಿದ್ದು ಎ.ಆರ್. ರವರು ಕಾನೂನು ಕ್ರಮ ತೆಗೆದುಕೊಳ್ಳುವಂತೆ ಆದೇಶ ನೀಡಿದ್ದರಿಂದ ನಾನು ಪುನಃ ಕಾರ್ಯದರ್ಶಿಯವರ ಬಳಿ ದುರುಪಯೋಗ ಆದ ಚೆಕ್ ಬಗ್ಗೆ ಏನಾಗಿದೆ ಎಂದು ವಿಚಾರಿಸಲಿಲ್ಲ.

2015-2016ರ ಆಡಿಟನ್ನು ನಾನು ಮತ್ತು ಕಮಿಟಿ ಸದಸ್ಯರು ನೋಡಿ ಅದನ್ನು ಒಪ್ಪಿ ಸಹಿ ಹಾಕಿರುತ್ತೇನೆ. ಈಗ ಸಾಕ್ಷಿಗೆ 2015-2016ರನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ದೃಢೀಕೃತ ನಕಲನ್ನು ತೋರಿಸಿದ್ದು ಸದರಿ ವರದಿಯ ಪುಟಸಂಖ್ಯೆ 50ರಲ್ಲಿರುವ ಅಧ್ಯಕ್ಷರ ಸಹಿ ನನ್ನ ಸಹಿ ಎಂದು ಒಪ್ಪಿರುತ್ತಾರೆ. ಸದರಿ ವರದಿಯನ್ನು ನಿಡಿ-5 ಎಂದು, ಸಾಕ್ಷಿ ಗುರುತಿಸಿದ ಸಹಿಯನ್ನು ನಿಡಿ-5(ಎ) ಎಂದು ಗುರುತಿಸಲಾಯಿತು. ನಿಡಿ-5ರ ಪುಟ ಸಂಖ್ಯೆ 17ರ 37(ಬ) ರೀತ್ಯಾ ರೂ.94,84,982-00 ವ್ಯಾಪಾರ ಉದ್ರಿ ಬರಬೇಕಾಗಿರುತ್ತದೆ ಎಂದು ನಮೂದು ಮಾಡಲಾಗಿದೆ ಎಂದರೆ ಖಂಡಿಕೆ 42ರ ರೀತ್ಯಾ ಆ ಸಾಲಿನಲ್ಲಿ ಯಾವುದೇ ಹಣ ದುರುಪಯೋಗ ಆಗಿಲ್ಲ ಎಂಬುದಾಗಿ ನಮೂದು ಇರುವುದನ್ನು ನೋಡಿ ನಾನು ಸದರಿ ವರದಿಗೆ ಸಹಿ ಹಾಕಿದ್ದೇನೆ ಎನ್ನುತ್ತಾರೆ.

ಸೊಸೈಟಿಯ ಮೂಲಕ ಎಸಿಸಿ ಸಿಮೆಂಟನ್ನು ಮಾರಾಟ ಮಾಡಲಾಗುತ್ತಿತ್ತು ಎಂದರೆ ಸರಿ. ನಿಗಧಿತ ಪರಿಮಾಣಕ್ಕಿಂತ ಹೆಚ್ಚು ಸಿಮೆಂಟ್ ಮಾರಾಟ ಮಾಡಿದರೆ ಎಸಿಸಿ ಸಿಮೆಂಟ್‌ನವರು ಮಲಬಾರ ಚಿನ್ನದ ನಾಣ್ಯ ಕೊಡುತ್ತಿದ್ದರು ಎಂದರೆ ಚಿನ್ನದ ನಾಣ್ಯ ಅಂತೇನೂ ಇಲ್ಲ, ಏನಾದರೂ ಉಡುಗೊರೆ ಕೊಡುತ್ತಿದ್ದರು ಎನ್ನುತ್ತಾರೆ. 2014-2015ನೇ ಸಾಲಿನಲ್ಲಿ ಮಲಬಾರ ಗೋಲ್ಡನಿಂದ ಸುಮಾರು 50 ಸಾವಿರ ಬೆಲೆ ಬಾಳುವ ಚಿನ್ನದ ನಾಣ್ಯ ಮತ್ತು ಇತರೇ ವೋಚರಗಳು ಬಂದಿತ್ತು ಎಂದರೆ ಸರಿ. ಆದರೆ ಆ ವಿಚಾರ ನನಗೆ ತದನಂತರದಲ್ಲಿ ಗೊತ್ತಾಯಿತು ಎನ್ನುತ್ತಾರೆ. ಸದರಿ ಚಿನ್ನದ ನಾಣ್ಯದ ಬಗ್ಗೆ ಆಡಿಟ್ ವರದಿಯಲ್ಲಾಗಲೀ, ಸಂಘದ ಬ್ಯಾಲೆನ್ಸ ಶೀಟನಲ್ಲಿ ತೋರಿಸಿಲ್ಲ ಎಂದರೆ ಅದು ಗಿಫ್ಟ ವೋಚರ್ ಆದ್ದರಿಂದ ತೋರಿಸಿಲ್ಲ ಎನ್ನುತ್ತಾರೆ. ಸದರಿ ಗಿಫ್ಟ ವೋಚರಗಳನ್ನು ಸೊಸೈಟಿಯ ಹೆಸರಿಗೆ ಕೊಡಲಾಗಿರುತ್ತದೆ ಎಂದರೆ ಸರಿ. ಸದರಿ ವೋಚರಿನ ಮೊತ್ತವು ಸೊಸೈಟಿಯ ಹಣ ಎಂದರೆ ಸರಿ.

ಮುಂಗಡ ಹಣ ಕೊಟ್ಟು ಎಸಿಸಿ ಸಿಮೆಂಟ್ ಖರೀದಿಸಿದರೆ ಅವರು ವಿನಾಯತಿ ಕೊಡುತ್ತಿದ್ದರು ಎಂದರೆ ವಿನಾಯತಿಯ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಎಸಿಸಿ ಸಿಮೆಂಟನವರಿಗೆ ಮುಂಗಡ ಹಣವನ್ನು ಆರ್.ಟಿ.ಜಿ.ಎಸ್. ಮೂಲಕ ಕೊಡುತ್ತಿದ್ದರು ಅದಕ್ಕೆ ನಾನು ಮತ್ತು ಕಾರ್ಯದರ್ಶಿ ಸಹಿ ಹಾಕುತ್ತಿದ್ದೆವು. ಸಾಮಾನ್ಯವಾಗಿ ಮುಂಗಡ ಹಣವನ್ನು ಸಂಘದ ಖಾತೆಯಿಂದಲೇ ಜಮಾ ಮಾಡಲಾಗುತ್ತದೆ. ಆದರೆ ಸಬ್ ಡೀಲರಗಳ ಮೂಲಕ ಹಣ ಹಾಕಿಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಪ್ರತಿವರ್ಷವೂ ಬೆಳೆ ಸಾಲವನ್ನು ರೈತರಿಂದ ಸಂಪೂರ್ಣವಾಗಿ ವಸೂಲಿ ಮಾಡಲಾಗುತ್ತಿತ್ತು ಎಂದರೆ ರೈತರೇ ಸಂಪೂರ್ಣವಾಗಿ ತುಂಬುತ್ತಿದ್ದರು ಎನ್ನುತ್ತಾರೆ. ಶೇ.100 ರಷ್ಟು ಬೆಳೆಸಾಲ ವಸೂಲಾಗಿದೆ ಎಂದು ತೋರಿಸಲು ನಿರ್ದೇಶಕರಿಂದ ಕಾರ್ಯದರ್ಶಿಯವರು ಸಂಸ್ಥೆಯ ವತಿಯಿಂದ ಹಣ ತೆಗೆದುಕೊಂಡು ಸಂಪೂರ್ಣ ಬೆಳೆ ಸಾಲ ವಸೂಲಾಗಿದೆ ಅಂತ ಲೆಕ್ಕ ತೋರಿಸಲಾಗುತ್ತಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಬೆಳೆಸಾಲ ಮಂಜೂರಾದ ನಂತರ ಮೊದಲೇ ನಿರ್ದೇಶಕರ ಮೂಲಕ ಪಡೆದುಕೊಂಡಿದ್ದ ಹಣವನ್ನು ಕಾರ್ಯದರ್ಶಿಯವರು ನಿರ್ದೇಶಕರಿಗೆ ಮರುಪಾವತಿಸುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿಗೆ 2 ನೇ ಆರೋಪಿ ಯಾವುದೇ ಚೆಕ್ ನ್ನು ಕದ್ದು ಕೊಟ್ಟಿಲ್ಲ ಎಂದರೆ ಸರಿಯಲ್ಲ.

2014 ರಿಂದ 2019 ರ ವರೆಗೆ ಸೊಸೈಟಿಯಿಂದ ದವಸದಾನ್ಯದ ವ್ಯಾಪಾರ ನಿಲ್ಲಿಸಲಾಗಿತ್ತು ಎಂದರೆ ಸರಿಯಾಗಿ ನೆನಪಿಲ್ಲ, ನಿಲ್ಲಿಸಿರಬಹುದು ಆದರೆ ಸಂಘದ ಎರಡನೇ ಕಚೇರಿಯನ್ನು ರೇಶನ್ ಸೆಕ್ಷನ್ ಅಂತನೇ ಕರೆಯುತ್ತಿದ್ದು ಅಲ್ಲಿ 2 ನೇ ಆರೋಪಿ ಇದ್ದರೆ ಯಾವುದೇ ರೇಶನ್ ಕೊಡದೇ ಇದ್ದರೂ ಆತ ರೇಶನ್ ಸೆಕ್ಷನ್ ನಲ್ಲಿ ಇದ್ದರು ಎಂದು ಹೇಳುತ್ತೇವೆ. ಲಕ್ಷ್ಮೀನಾರಾಯಣ ಶಾನಭಾಗರವರು ಪಡಿತರ ವಿಭಾಗದಲ್ಲಿ ಕೆಲಸ ಮಾಡುವುದರಿಂದ, 2 ನೇ ಆರೋಪಿ ಸ್ಥಳೀಯವರೇ ಆದ್ದರಿಂದ ಅವರ ಕೈಯಲ್ಲಿ ಕೀ ಕೊಟ್ಟು ಹೋಗಲಾಗುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 26-09-2016 ರಂದು ಲಕ್ಷ್ಮೀನಾರಾಯಣ ಶಾನಭಾಗರು ಸೊಸೈಟಿಯಲ್ಲೇ ಇದ್ದರು ಎಂದರೆ ಸರಿಯಲ್ಲ. ಅವರು ಸೊಸೈಟಿಯಲ್ಲಿ ಇದ್ದದ್ದರಿಂದಲೇ ಸಿಸಿಟಿವಿಯನ್ನು ಮರೆಮಾಚಲಾಗಿದೆ ಎಂದರೆ ಸರಿಯಲ್ಲ. ನಾನು ಮತ್ತು ವಕೀಲರು ಸೇರಿ ಕಾರ್ಯದರ್ಶಿಯನ್ನು ಉಳಿಸುವ ಸಲುವಾಗಿ ಯೋಜನೆ ಹಾಕಿಕೊಂಡು ಚರ್ಚೆ ಮಾಡಿ ಸುಳ್ಳು ದೂರನ್ನು ತಯಾರಿಸಿದ್ದೇವೆ ಎಂದರೆ ಸರಿಯಲ್ಲ. ಕಾರ್ಯದರ್ಶಿಯ ಮೇಲೆ ಸುಮಾರು 70 ಲಕ್ಷದ ಅವ್ಯವಹಾರದ ಕ್ರಿಮಿನಲ್ ಮೊಕದ್ದಮೆ ಇದ್ದು ಅವನನ್ನು ಉಳಿಸಬೇಕಾದ ಅನಿವಾರ್ಯತೆ ಇಲ್ಲ ಎನ್ನುತ್ತಾರೆ. ದೂರಿನಲ್ಲಿ ಹೇಳಿರುವಂತೆ ಆರೋಪಿತರು ಯಾವುದೇ ಅಪರಾಧವನ್ನು ಮಾಡದೇ ಇದ್ದರೂ ನಾವು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. 2 ನೇ ಆರೋಪಿ ಯಾವುದೇ ಚೆಕ್ ನ್ನು 1 ನೇ ಆರೋಪಿಗೆ ಕೊಟ್ಟಿಲ್ಲ ಮತ್ತು 1 ನೇ ಆರೋಪಿ ಯಾವುದೇ ಚೆಕ್ ನ್ನು ದುರುಪಯೋಗಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಕೆಲವೊಂದು ವಿಚಾರಗಳು ನನ್ನ ಮೈಮೇಲೆ ಬರುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ದೂರನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**